Regd No BG 155

— ಶ್ರೀ —

15—3—1962

Sri "SATYAVADI"
— DAILY —
MYSORE 4
46 th Year

ಸತ್ಯವಾದಿ
SATYAVADI

ಪ ನು ಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ಬೆಂಗಳಿಗೆ 6 ಆಣೆ

Protect the cow

ಸ್ಥಾಪಕರು— ಅರಮನೆ ಸಿಂಸ್ಥೇದಾರ್ ಎಂ. ವಿ. ಸುಬ್ಬರಾಯುರು [ಬಿಡಿ ಪ್ರತಿ 3 ಪೈ

ಗೋಸಂರಕ್ಷಣೆ ಮಾಡಿ

ಅಗತವಾದಲ್ಲಿ ಇನ್ನೂ ಹೆಚ್ಚು ಮಂತ್ರಿಗಳನ್ನು ನೇಮಿಸಲು ಅವಕಾಶ

ಮೈಸೂರು ರಾಜ್ಯದ ವಿಶಾಲ ಹಿತ ದೃಷ್ಟಿಯಿಂದ ಮುಖ್ಯ ಮಂತ್ರಿ ಶ್ರೀ ಎಸ್ ಆರ್ ಕಂತಿಯವರು ಮಂತ್ರಿಮಂಡಲದ ರಚನೆಗೆ ಸಂಬಂಧಿಸಿದಂತೆ ಕೇಂದ್ರ ಮಂತ್ರಿ ಶ್ರೀ ಲಾಲ ಬಹದ್ದೂರ್ ಶಾಸ್ತ್ರಿಯವರೊಡನೆ ಸಂಪರ್ಕ ಹೊಂದಿರುವರೆಂಬ ವದಂತಿ ಬೆಂಗಳೂರು ವಾರ್ತೆ ಅಗತ್ಯ ಬಿದ್ದರೆ ಸರ್ವ ವರ್ಗಕ್ಕೂ ಪ್ರಾತಿನಿಧ್ಯ ಕೊಡುವ ಸಲುವಾಗಿ ಹೈ ಕಮಾಂಡು ಮಂತ್ರಿಗಳ ಸಂಖ್ಯೆಯನ್ನು ಹೆಚ್ಚಿಸಲೂ ಕೂಡ ಬಹುದು

ಮಂತ್ರಿಗಳಾಗಬಹುದು

ಮೈಸೂರು ಮಂತ್ರಿ ಪದವಿಗೆ ಹಣ ಸೂರಿನಿಂದ ಅವಿರೋಧವಾಗಿ ಆಯ್ಕೆ ಆದ ಶ್ರೀ ಡಿ ದೇವರಾಜ ಅರಸು ಹಾಗೂ ಶ್ರೀ ಕೊಂಡಜ್ಜಿ ಬಸಪ್ಪನವರು ಹೆಸರು ಕೇಳಿಬರುತ್ತಿದೆ. ಅದರೆ ದೇವರಾಜ ಅರಸುರವರ ಹೆಸರಿಗೆ ಹೆಚ್ಚು ಸಮರ್ಥನೆ ಇದೆ

oo

ಶ್ರೀ ಬಿ ಡಿ ಜತ್ತಿಯವರ ಗುಂಪಿನವರಾದ್ದರಿಂದ ಮಂತ್ರಿಮಂಡಲಕ್ಕೆ ತೆಗೆದು ಕೊಳ್ಳಕೂಡದೆಂದು ಮಂತ್ರಿಮಂಡಲದ ಗುಂಪಿನ ಹಠವಿದೆ ಎಂದು ವದಂತಿ.

ಮೈಸೂರು ಉಪಮಂತ್ರಿಗಳು

ಶ್ರೀಗಳಾದ ಕೆ ಪ್ರಭಾಕರ ಆರ್ ಕೆ ಪ್ರಸಾದ್, ಜಿ ಬಿ ಶಂಕರರಾವ್, ವೈ ರಾಮಚಂದ್ರ, ಶ್ರೀ ಪಂಚಗವಿ ಶ್ರೀ ಕೊಂಡಜ್ಜಿ ಬಸಪ್ಪನವರನ್ನು ಸೇರಿಸಿಕೊಳ್ಳಬಹುದು ಕಡೆಯದಾಗಿ ಶ್ರೀ ನಾಡಿಗೌಡ ಅಥವಾ ಶ್ರೀ ಸಿ ಎಂ ದೇಸಾಯಿಯವರ ಹೆಸರೂ ಇದೆ

★

ಗೋವಾ ಭಾರತದ ಪ್ರದೇಶವೆಂಬ ಮಸೂದೆ ನಿನ್ನೆ ಲೋಕಸಭೆಯಲ್ಲಿ ಅಂಗೀಕೃತವಾಯಿತೆಂದು ನವ ದೆಹಲಿ ವಾರ್ತೆ

ಆಶ್ಚರ್ಯ !

ಉತ್ತರ ಪ್ರದೇಶದ ಮುಖ್ಯ ಮಂತ್ರಿ ಶ್ರೀ ಸಿ ಬಿ ಗುಪ್ತ 14 ಕಾ ಬಿ ನೆ ಟ್ ಮಂತ್ರಿಗಳು, 4 ಮಂದಿ ವಿಶೇಷ ಆಫ್ ಸ್ಪೇಟ್‌ಗಳು ಮತ್ತು 7 ಮಂದಿ ಉಪ ಮಂತ್ರಿಗಳು ಪ್ರಮಾಣ ವಚನವನ್ನು ನಿನ್ನೆ ಲಕ್ನೋವಿನಲ್ಲಿ ರಾಜ್ಯಪಾಲರ ಸಮ್ಮುಖದಲ್ಲಿ ಸ್ವೀಕರಿಸಿದರು ಭಿನ್ನಮತೀಯ ಕಾಂಗ್ರೆಸ್ ತಂಡದ ನಾಯಕ ಶ್ರೀ ಕಮಲಾಪತಿ ತ್ರಿಪಾಠಿ ಮತ್ತು 4 ಮಂದಿ ಪದಸ್ಥರು ಪ್ರಮಾಣ ವಚನಕ್ಕೆ ಹೋಗದಿದ್ದದ್ದು ಆಶ್ಚರ್ಯವದ್ದೆಂಟು ಮಾಡಿದೆ.

ನಿರಾಕರಣೆ

ನೇಪಾಳದ ತ್ರಿಭುವನ ವಿಶ್ವವಿದ್ಯಾನಿಲಯದಿಂದ ಗೌರವ ಪ್ರಶಸ್ತಿ ಸ್ವೀಕರಿಸಲು ಈರ್ವರು ರಾಜಮಾತೆಯರು ನಿರಾಕರಿಸಿರುವರೆಂದು ಖಟಮಂಡು ವಾರ್ತೆ ಸಾಮಾನ್ಯರಲ್ಲಿ ವಿದ್ಯಾಸಾಂಗತರಾದವರಿಗೆ ಪ್ರಶಸ್ತಿ ಕೊಡಬೇಕೆಂದು ತಿಳಿಸಿರುವರು

ಖೋತಾ ಅಂದಾಜುಪಟ್ಟಿ

ಭಾರತ ಸರ್ಕಾರದ ಹಣಕಾಸಿನ ಮಂತ್ರಿ ಶ್ರೀ ಮೊರಾರ್ಜಿದೇಸಾಯಿಯವರು ಲೋಕಸಭೆಯಲ್ಲಿ ನಿನ್ನೆ ಅಂದಾಜುಪಟ್ಟಿ ಮಂಡಿಸಿದರು 62-63 ನೆಯ ಸಾಲಿನ ಅಂದಾಜುಪಟಿಯಲ್ಲಿ ರೂ 63-46 ಕೋಟಿ ಖೋತಾ ಬಿದ್ದಿದೆ ಆರ್ಥಿಕತೆಯಲ್ಲಿ ಭದ್ರತೆ ಹೆಚ್ಚಿಸಲು ಉತ್ಪಾದನೆ ಹೆಚ್ಚಿಸಿಕೊಳ್ಳಬೇಕೆಂದು ಅವರು ನುಡಿದರು ಈ ಪಟ್ಟಿಯಲ್ಲಿ ಹೊಸ ತೆರಿಗೆಗಳು ಸೂಚಿತವಾಗಿಲ್ಲ

★

2 ಮಂತ್ರಿ ಮತ್ತು 2 ಉಪ ಮಂತ್ರಿ ಸ್ಥಾನಗಳನ್ನು ಖಾಲಿ ಹೊಂದಿರುವದಾಗಿ ಬೆಂಗಳೂರು ವಂದಿ

ಮಂತ್ರಿಗಳಿಗೆ ಖಾತೆಗಳ ಹಂಚಿಕೆ

ಮೈಸೂರು ಮುಖ್ಯ ಮಂತ್ರಿ ಶ್ರೀ ಎಸ್. ಆರ್ ಕಂತಿಯವರು ಸಾಮಾನ್ಯ ಆಡಳಿತ, ಹಣಕಾಸು ಮತ್ತು ಶಿಕ್ಷಣ

ಶ್ರೀ ಆರ್. ಎಂ. ಪಾಟೀಲರು ಗೃಹ ಶಾಖೆ

ಶ್ರೀ ಎಂ ವಿ ಕೃಷ್ಣಪ್ಪನವರು ರೆವಿನ್ಯೂ ಮತ್ತು ಅಬ್ಕಾರಿ

ಶ್ರೀ ಎಂ ವಿ ರಾಮಯ್ಯಂವಾಂವರು ಕಾನೂನು ಮತ್ತು ಕಾರ್ಮಿಕ ಶಾಖೆ

ಶ್ರೀಮತಿ ಯಶೋಧರಮ್ಮನವರು ಹರಿಜನ ಮತ್ತು ಗಿರಿಜನ, ಸಮಾಜ ಕಲ್ಯಾಣ ಮಂಡಲಿ

ಶ್ರೀ ಮಲ್ಲಪ್ಪನವರು ವಾಣಿಜ್ಯ ಸೈಗಾದಿಕೆ,

ಡಾ|| ನಾಗಪ್ಪ ಆಳ್ವರು ಸಾರ್ವಜನಿಕ ಆರೋಗ್ಯ,

ಶ್ರೀ ವೀರೇಂದ್ರ ಪಾಟೀಲರು, ಕಾನೂಗಾರಿ ಶಾಖೆ.

ಶ್ರೀ ಬಿ. ರಾಚಯ್ಯನವರು, ವ್ಯವಸಾಯ

× ಶ್ರೀಗಳಾದ ರಾವ ಕೃಷ್ಣ ಹೆಗ್ಗಡೆ ಮತ್ತು ಕೆ ಪುಟ್ಟಸ್ವಾಮಿಯವರನ್ನು ಮಂತ್ರಿಯವರನ್ನಾಗಿ ನೇಮಿಸುವ ನಿರ್ಧಾರವಾಗಿದೆ.

× ದಾವಿಡ ಮುನ್ನೇತ್ರ ಕಳಗಂ ಬಲಯುತ ವಿರೋಧಪಕ್ಷವಾಗಿ ಬಂದಿರುವ ಬಗ್ಗೆ, ರಾಜ್ಯಸಭೆಯಲ್ಲಿ ಪದಸ್ಥರು ಅಭಿನಂದನೆ ವ್ಯಕ್ತಪಡಿಸಿದರು

ನಾಳೆಯ ಪಂಚಾಂಗ

ಆಸ್ಥಾನ ಮಹಾವಿದ್ವಾನ್ ದರ್ಮಾಧಿಕಾರಿ
ದೈವಜ್ಞ ಶಿಖಾಮಣಿ
ಸಂಪತ್ಕುಮಾರ ಜೋಯಿಸರಿಂದ

16 ಏಕಾದಶಿ ಪುನರ್ವಸು

ವಿವಿಧ ವಿಷಯಗಳು

ಏಪ್ರಿಲ್ 3 ನೆಯ ತಾ|| ಸಂಜೆ ನವ ದೆಹಲಿಯಲ್ಲಿ ಪಾರ್ಲಿಮೆಂಟರಿ ಕಕ್ಷದ ಸಭೆ ಸೇರಿ ನಾಯಕರ ಆಯ್ಕೆ ಮಾಡುವುದು ಏಪ್ರಿಲ್ ಮಾಹೆ ಮೊದಲನೆ ವಾರದ ಅಂತ್ಯದಲ್ಲಿ ಹೊಸ ಮಂತ್ರಿಮಂಡಲದ ರಚನೆ ಆಗುವ ನಿರೀಕ್ಷೆ ಇದೆ. ಮುಂದಿನ ಮಾಹೆ 14 ರಂದು ಸೇರುವ ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಭಾರತ ರಾಷ್ಟ್ರಪತಿ, ಉಪ ರಾಷ್ಟ್ರಪತಿ ಪದವಿಗೆ ಅಭ್ಯರ್ಥಿಗಳನ್ನು ಆರಿಸುವುದು. ಭಾರತದ ಅಧ್ಯಕ್ಷರಾಗುವಂತೆ ಡಾ|| ರಾಧಾಕೃಷ್ಣನ್‌ರನ್ನು ಔಪಚಾರಿಕವಾಗಿ ಪ್ರಾರ್ಥಿಸಲಾಗುವುದು.

ಉಪ್ಪಾರಹಟ್ಟಿ ಅಣೆಕಟ್ಟು ಪರೀಕ್ಷಿಸತ್ತಿದ್ದಾಗ ಧಾರಾ ಪೆರಿಯಾರು ಡಿವಿಜನ್ನಿನ ಸೂಪರಿಂಟೆಂಡಿಂಗು ಇಂಜಿನಿಯರುಗಳಾದ ಶ್ರೀಗಳಾದ ಚಾಕೋ ಡೇವಿಡ್ ಮತ್ತು ಷಣ್ಮುಗಸುಂದರಂ ಸೂರಿಲಿಯಾರ್ ನದಿಯಲ್ಲಿ ಮುಳುಗಿದರು

ಉದಕಮಂಡಲಕ್ಕೆ 12 ಮೈಲಿ ದೂರದಲ್ಲಿ ಮೊನ್ನೆ ಕಾಡಿನಲ್ಲಿ ಬೆಂಕಿ ಅನಾಹುತವಾಗಿ ಕಾವಲುಗಾರ, ಗಾರ್ಡ್ ಮತ್ತು ಮೇಸ್ತ್ರಿ ಸತ್ತರು

ನಿನ್ನೆ ಮೈಸೂರು ಮಂತ್ರಿಗಳು ಬೆಂಗಳೂರಿನಲ್ಲಿ ಪ್ರಮಾಣ ವಚನ ಸ್ವೀಕರಿಸಿದ ನಂತರ, ರಾಜ್ಯಪಾಲರೊಡನೆ ಭಾವಚಿತ್ರ ತೆಗೆಯಲಾಯಿತು

ನವ ದೆಹಲಿಯಲ್ಲಿರುವ ಪ್ರಧಾನಿಗಳ ಗೃಹದ ಲಾರ್ನಲ್ಲಿ ಶ್ರೀಮತಿ ಇಸಿಡಿಯವರು ಆನೆ ಮರಿಗೆ ಕಬ್ಬು ತಿನ್ನಿಸಿದರು ಶ್ರೀಮತಿ ಕೆನೆಡಿಯವರು ಆರ್ಟ್ ಕಾರ್ನಿವಾಲ್‌ನ್ನು ಮಕ್ಕಳಿಗೆ ಅರ್ಪಿಸಿದರು

ಮೈಸೂರು ರಾಜ್ಯದ ಉಪ ಮಂತ್ರಿಗಳನ್ನಾಗಿ ಶ್ರೀ ಹೆಚ್ ಆರ್ ಅಬ್ದುಲ್ಲ ಗಫಾರ್ ಮತ್ತು ಶ್ರೀ ಮಕ್ಸೂದ್ ಅಲಿ ಖಾರ್ ನೇಮಕವಾಗುವದಾಗಿ ತಿಳಿದು ಬಂದಿದೆ.

ಘಂಟಾನಾದದ ಮಹತ್ವ

(ಮುಂದುವರಿದುದು)

★

ಘಂಟೆ-ಜಾಗಟೆಗಳ ಮೇಲೆ ಒಂದೇಸಮನೆ ಪೆಟ್ಟು ಬೀಳುತ್ತಾ ಇರುವುದರಿಂದ ಅವುಗಳಲ್ಲಿ ವಿದ್ಯುಚ್ಛಕ್ತಿಯು ಸಂಗ್ರಹವಾಗುವುದು.

ಇದಕ್ಕೊಂದು ಸಹಜ ಪ್ರಮಾಣವಿದೆ —

ಪ್ರಸವವೇದನೆಯಾಗುತ್ತಿದ್ದಾಗ ಮಗುವನ್ನು ಹೆಂದ ಇಬ್ಬರು ಸ್ತ್ರೀಯರೊಳಗೆ, ಒಬ್ಬಳಿಗೆ ಬೇಂಕವ ಧಾತು (ಲೋಹ) ವನ್ನು ತೊಳೆದು ನೀರನ್ನು ಕುಡಿಸಿರಿ ; ಮತ್ತೊಬ್ಬಳಿಗೆ ಜಾಗಟೆ ಅಥವಾ ಗಂಟೆಯನ್ನು ತೊಳೆದು ನೀರನ್ನು ಕುಡಿಸಿರಿ : ಆಗ ಗಂಟೆಯ ನೀರು ಕುಡಿಸಿದವಳಿಗೆ ಜಲವೀಯುತ್ತಲೇ ಪ್ರಸವವಾಗುವುದನ್ನೂ, ಇನ್ನೊಬ್ಬಳಿಗೆ ಆಗದುದನ್ನೂ ನೀವು ನೋಡಬಹುದು : ಜಾಗಟೆ ಮತ್ತು ಗಂಟೆಯಲ್ಲಿ ವಿದ್ಯುತ್ತೂ ಸಂಗ್ರಹೀಕವಾಗಿರುವುದೆಂದೂ, ನಾವು ಆ ಗಂಟೆ ಅಥವಾ ಜಾಗಟೆಯನ್ನು ಭಾರಿಸುವಾಗ ಆ ವಿದ್ಯುತ್ತು ನಮ್ಮ ಶರೀರದೊಳಗೆ ಪ್ರವೇಶಿಸುತ್ತದೆಂದೂ ಇದರಿಂದ ಸ್ಪಷ್ಟವಾಗಿ ಸಿದ್ಧವಾಗುವುದು, ಎಂದು ಘಂಟಾನಾದದ ಮಹತ್ವವನ್ನು ಶ್ಲಾಘಿಸಿದ್ದಾರೆ

ಇಷ್ಟನ್ನು ನೀವು ಕೇಳಿದಮೇಲೆ ಘಂಟಾನಾದದ ವಿಷಯವಾಗಿ ನಮ್ಮ ಶಾಸ್ತ್ರಗಳಲ್ಲಿ ಗುಂಭಿತವಾಗಿ ಹೇಳಿರುವ, ಅಸುರೀಶಕ್ತಿಯು ದಮನ ಮತ್ತು ದೈವೀ ಶಕ್ತಿಯು ಆಗಮನಕ್ಕೆ ಘಂಟಾನಾದವು ನಾಂದಿಯಾಗಿದ್ದೀತೆ ಎಂಬ ವಿಷಯದಲ್ಲಿ ಸಂದೇಹಪಡಲಾರಿರಿ.

ಇನ್ನು ಆ ಘಂಟೆಯಲ್ಲಿ ದೇವತ್ವವನ್ನೂ ಕಲ್ಪಿಸಿ ದೇವತಾಭಾವನೆಯಿಂದ ನಾದಮಾಡುವಾಗ, ಆ ಧ್ವನಿಯು ಮೂಲಕ ಉತ್ಪನ್ನವಾಗುವ ವಿದ್ಯುಚ್ಛಕ್ತಿಯು ವ್ಯಾಪಾರವನ್ನೇ ಆಗೋಚರವಾಗಿ ಚರಾಚರ ಪ್ರಪಂಚದ ಉದ್ಧಾರಕ್ಕಾಗಿ ಅನುಗ್ರಹವಾಗುವ ದೈವೀಶಕ್ತಿಯೊಂದೇ ಭಾವಿಸಬೇಕಾದುದು— ಅಸ್ತಿಕಂ ನಂ ಬಿ ಕೆಯಾಗಿದೆ (ಧ ಸಂ)

ಗೋರಕ್ಷಣ ಪ್ರಾಣಿದಯಾ ಕಾರ್ಯಗಳು ಹೆಚ್ಚಿಚ್ಚಾಗಿ ಪಡೆಯಲಿ



SHAKTI SUDHA

A Superb Tonic

ವುಡ್‌ಲ್ಯಾಂಡ್ಸ್ ತೇಜಸ್ವಿ 6 ನೇ ವಾರ

ಜಂಗ್ಲಿ (ಹಿಂದಿ) Junglee

ನಟವರ್ಗ— ಶಮ್ಮಿ ಕಪೂರ್, ಸೈರಾ ಬಾನು, ಲಲಿತಾ ಪವಾರ್ ಹೆಲೆ

ಸಂಗೀತ— ಶಂಕರ್-ಜೈಕಿಶನ್ [ದಿನವಹಿ 3 ಪ್ರದರ್ಶನಗಳು]

ಅಪೆರಾ— 15—3—62 ರಿಂದ

ಅಡುತ ವೀಟು ಪೆಣ್ (ತಮಿಳು)

ಪಾತ್ರ— ಅಂಜಲೀದೇವಿ, ಟಿ. ಆರ್. ರಾಮಚಂದರ್, ಫ್ರೆಂಡ್ ರಾಮಸ್ವಾಮಿ

ಕಂಜೀವರಂ [ದಿನವಹಿ 3 ಆಟಗಳು]

Help The 'Gorakshana'

"ಗೋರಕ್ಷಣ" ಪತ್ರಿಕೆಗೆ ಬೆಂಬಲಿಗರಾಗಿರಿ

ಗೋರಕ್ಷಣೆ, ಪ್ರಾಣಿದಯೆ, ಪಶುವೈದ್ಯ, ಶಾಕಾಹಾರ ವಿಚಾರಗಳ ಪ್ರಚಾರದ ಏಕೈಕ ಕನ್ನಡ ಪತ್ರಿಕೆ.

ಗೋರಕ್ಷಣ ಪತ್ರಿಕೆಗೆ ಸಹಾಯದ್ರವ್ಯ ಮತ್ತು ಪ್ರಕಟಿಸಲು ಅನುಕೂಲವಾದ ಲೇಖನಗಳನ್ನೂ ವಾರ್ತೆಗಳನ್ನೂ ವಂದನಾಪೂರ್ವಕವಾಗಿ ಸ್ವೀಕರಿಸಲಾಗುವುದು

ವಿಳಾಸ : ಗೋರಕ್ಷಣ ಆಫೀಸ್, ಚಾಮರಾಜಪುರಂ, ಮೈಸೂರು



— — Super Space Engine — —

Edited, Printed & Published by the Proprietor, Dharma Prachara Nirata M. S. Krishna Rao at the Satyavadi Press Chamarajapuram, Mysore 4.